# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. 110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಚಂದ್ರರಾಜೇ ಅರಸ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ನಂಜುಂಡರಾಜೇ ಅರಸ್ | | 12.12.2022 |
| ವಯಸ್ಸು | ಃ 40 ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. | ಃ 23 |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ 40 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನಗೆ ಸೇರಿದ ಜಮೀನು ಸ.ನಂ *296* ಕೇರ್ಗಳ್ಳಿ ಗ್ರಾಮದಲ್ಲಿ ಇದೆ. ಸದರಿ ಜಮೀನಿನಲ್ಲಿ *6* ಚದರ ಮನೆ ಇದೆ. ನ್ಯಾಯಾಲಯದಲ್ಲಿ ಹಾಜರು ಇರುವ *5* ನೇ ಆರೋಪಿ ಧರ್ಮೇಂದ್ರ ಪರಿಚಯ ಇಲ್ಲ. ನಿ.ಪಿ.*90* ದಾಖಲೆಯಲ್ಲಿ ನಿ.ಪಿ.*90(ಬಿ)* ನನ್ನ ಸಹಿ ಇದೆ. ಈಗ *6-7* ವರ್ಷಗಳ ಹಿಂದೆ ನಾನು ಸಹಿ ಮಾಡಿದ್ದೇನೆ. ಸ್ಥಳ, ದಿನಾಂಕ ಮತ್ತು ಕಾರಣ ಹಾಗೂ ನಿ.ಪಿ. *90* ರ ಅಂಶಗಳ ಬಗ್ಗೆ ಗೊತ್ತಿಲ್ಲ. ಜಮೀನಿನಲ್ಲಿ ಇದ್ದ ಮನೆಯನ್ನು ಧರ್ಮೇಂದ್ರ ಅವರಿಗೆ *2015-2016* ರಲ್ಲಿ *3-4* ತಿಂಗಳ ಅವದಿಗೆ ಬಾಡಿಗೆಗೆ ನೀಡಲಾಗಿತ್ತು. ಸದರಿ ಧರ್ಮೇಂದ್ರ ವ್ಯಕ್ತಿಯನ್ನು ನೋಡಿಲ್ಲ, ಮುಖ ಪರಿಚಯ ಮತ್ತು ಕೆಲಸದ ಬಗ್ಗೆ ಮಾಹಿತಿ ಇಲ್ಲ. ನ್ಯಾಯಾಲಯದಲ್ಲಿ ಹಾಜರು ಇರುವ *2* ರಿಂದ *4* ನೇ ಆರೋಪಿಗಳನ್ನು ಮತ್ತು ನ್ಯಾಯಾಂಗ ಬಂಧನದಲ್ಲಿ ಇರುವ *1* ನೇ ಆರೋಪಿಯನ್ನು ನೋಡಿಲ್ಲ. *1* ರಿಂದ *5* ನೇ ಆರೋಪಿಗಳ ಹೇಳಿಕೆಯ ಮೇರೆಗೆ ನಮ್ಮ ಜಮೀನು ಮನೆಯಲ್ಲಿ ನಿ.ಪಿ.*90* ರ ಕಾಲದಲ್ಲಿ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ. ಪೊಲೀಸರು ಕೊಲೆ ಪ್ರಕರಣದ ಬಗ್ಗೆ ತಿಳಿಸಿದ್ದರು. ಹೆಚ್ಚಿನ

ವಿವರ ಗೊತ್ತಿಲ್ಲ. ನಾನು ನಮ್ಮ ಮನೆಯ ಬಳಿ ತನಿಖಾಧಿಕಾರಿ ಬಂದು ತನಿಖೆ ಮಾಡಿದ ಬಗ್ಗೆ ನಾನು ಹೇಳಿಕೆ ಕೊಟ್ಟಿಲ್ಲ. ನಿ.ಪಿ.*97* ದಾಖಲೆಯಲ್ಲಿ ನಿ.ಪಿ.*97(ಎ)(ಬಿ)(ಸಿ)* ಸಹಿಗಳು ನನ್ನದು ಇದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ಜಮೀನು ಮತ್ತು ಮನೆ ಉಸ್ತುವಾರಿಯನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ಮನೆಯನ್ನು ಬಾಡಿಗೆಗೆ ಕೊಡುವಾಗ ಸದರಿ ವ್ಯಕ್ತಿಯ ಬಗ್ಗೆ ಎಲ್ಲಾ ವಿವರವನ್ನು ತಿಳಿದು ಕರಾರು ಪತ್ರ ಮಾಡಿಕೊಂಡು ಬಾಡಿಗೆಗೆ ಕೊಡಲಾಗುತ್ತದೆ ಎಂದರೆ ಗೊತ್ತಿಲ್ಲ. ತಿಂಗಳ ಬಾಡಿಗೆ ನೆನಪಿಲ್ಲ. ದಿಃ *20.01.2016* ರಂದು ನಿ.ಪಿ.*97* ರಂತೆ *5* ನೇ ಆರೋಪಿ ಜೊತೆ ಮನೆ ಬಾಡಿಗೆ ಕರಾರು ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಹಿ ಪಡೆದ ಮಧ್ಯದ ವ್ಯಕ್ತಿ ಬಗ್ಗೆ ಗೊತ್ತಿಲ್ಲ. ಮುಂಗಡ ಹಣ ನೆನಪಿಲ್ಲ. ಕರಾರು ಪತ್ರ ದಿನದಂದು *5* ನೇ ಆರೋಪಿಯಿಂದ *50,000/-* ಸಾವಿರ ರೂಪಾಯಿ ಮುಂಗಡ ಹಣ ಪಡೆದು *3,000/-* ತಿಂಗಳ ಬಾಡಿಗೆ ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. *5* ನೇ ಆರೋಪಿ ಮಾತ್ರ ಸದರಿ ಮನೆಯಲ್ಲಿ ವಾಸ ಇದ್ದು *1* ರಿಂದ *4* ನೇ ಆರೋಪಿಗಳು ಸದರಿ ಮನೆಗೆ ಬಂದು ಹೋಗುತ್ತಿದ್ದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನಿ.ಪಿ.*97* ರ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ.

*3.* *1* ರಿಂದ *5* ನೇ ಆರೋಪಿಗಳ ಪರಿಚಯ ಇದ್ದು *5* ನೇ ಆರೋಪಿ ಸ್ಯಾಂಟ್ರೋ ಕಾರನ್ನು ಇಟ್ಟುಕೊಂಡಿದ್ದರು ಎಂದು ಗೊತ್ತಿಲ್ಲ. ನಿ.ಪಿ.*91* ರಿಂದ *96* ಫೋಟೋಗಳಲ್ಲಿ

ಕಂಡುಬರುವ ಮನೆ ನನಗೆ ಸೇರಿದೆ ಎಂದರೆ ಸರಿ. ನಿ.ಪಿ-94 ಫೋಟೋದಲ್ಲಿ ನಾನು ಮತ್ತು 5 ನೇ ಆರೋಪಿ ಇದ್ದೇವೆ ಎಂದರೆ ಸರಿ. ನಿ.ಪಿ-91 ಫೋಟೋದಲ್ಲಿ 2 ಮತ್ತು 4 ನೇ ಆರೋಪಿಗಳು ಕಂಡುಬರುತ್ತಾರೆ ಎಂದು ಗೊತ್ತಿಲ್ಲ. ನಿ.ಪಿ-94 ಫೋಟೋದಲ್ಲಿ 5 ನೇ ಆರೋಪಿ ಪೊಲೀಸರಿಗೆ ಯಾವುದೊ ವಸ್ತುವನ್ನು ತೋರಿಸುವ ಹಾಗೆ ಕಂಡುಬರುತ್ತದೆ ಎಂದರೆ ಸರಿ. ನಿ.ಪಿ-96 ಫೋಟೋದಲ್ಲಿ 3 ಮತ್ತು 5 ನೇ ಆರೋಪಿ ಮತ್ತು ನಾನು ಕಂಡುಬರುತ್ತೇವೆ ಎಂದರೆ ಸರಿ. ನಿ.ಪಿ-96 ಫೋಟೋದಲ್ಲಿ ಕಂಡುಬರುವಂತೆ 5 ನೇ ಆರೋಪಿ ಮೂರು ಮಚ್ಚುಗಳನ್ನು ಕೊಡುತ್ತಿರುವಂತೆ ಕಂಡುಬರುತ್ತದೆ ಎಂದರೆ ಸರಿ. ನನಗೆ ತೋರಿಸಿದ ಫೋಟೋದಲ್ಲಿ ಕಂಡುಬರುವ ಸ್ಯಾಂಟ್ರೋ ಕಾರನ್ನು 5 ನೇ ಆರೋಪಿ ತನ್ನ ಮನೆಯ ಮುಂದೆ ನಿಲ್ಲಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

4. ದಿಃ 29.12.2016 ರಂದು ಪೊ.ಠಾಣೆಯಲ್ಲಿ 1 ರಿಂದ 5 ನೇ ಆರೋಪಿಗಳನ್ನು ನನಗೆ ತೋರಿಸಿದ ಮೇರೆಗೆ ನಾನು ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ 5 ನೇ ಆರೋಪಿಯನ್ನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಕೃಷ್ಣ ಅವರನ್ನು ಕೊಲೆ ಮಾಡಿದ ಪ್ರಕರಣ ಸಂಬಂದ 1 ರಿಂದ 5 ನೇ ಆರೋಪಿಗಳನ್ನು ದಸ್ತಗಿರಿ ಮಾಡಿರುವುದಾಗಿ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. 5 ನೇ ಆರೋಪಿ ಹಲ್ಲೆಗೆ ಉಪಯೋಗಿಸಿದ ಮೂರು ಮಚ್ಚುಗಳನ್ನು ತಾನು ಬಾಡಿಗೆಗೆ ಇದ್ದ ಮನೆಯಲ್ಲಿ ಮುಚ್ಚಿಟ್ಟಿರುವುದಾಗಿ ಪೋಲೀಸರಿಗೆ ಹೇಳಿಕೆ ನೀಡಿದ ಮೇರೆಗೆ ಅವರ ಹೇಳಿಕೆಯಂತೆ ಸದರಿ ಮನೆಯಲ್ಲಿ ನಿ.ಪಿ-90 ರಂತೆ ಚಾ.ಸಾ-38, 39 ಮತ್ತು ನನ್ನ ಸಮಕ್ಷಮ ಸ್ಥಳ ಮತ್ತು ಅಮಾನತ್ತು ಮಹಜರ್ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ-90 ರ ವಿಷಯಗಳನ್ನು ನಾನು ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ ಮತ್ತು

ಅದೇ ಕಾಲದಲ್ಲಿ ನಿ.ಪಿ.91 ರಿಂದ 96 ರಂತೆ ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ಮೂರು ಮಚ್ಚುಗಳು ಮು.ಮಾ.24 ರಿಂದ 26 ನನ್ನ ಸಮಕ್ಷಮ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ.

5. ದಿಃ 13.12.2016 ರಂದು 1 ರಿಂದ 5 ನೇ ಆರೋಪಿಗಳು ಬಾಡಿಗೆ ಮನೆಯಲ್ಲಿ ಕುಳಿತು ಕೊಲೆ ಮಾಡುವ ಸಂಬಂದ ಸಂಚು ಮಾಡುತ್ತಿದ್ದರು ಮತ್ತು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ, ನನಗೆ ಈಗ ಓದಿ ಹೇಳಿದಂತೆ ನಿ.ಪಿ.98 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿಗಳು ಪರಿಚಯ ಇದ್ದ ಕಾರಣ ಮತ್ತು 5 ನೇ ಆರೋಪಿ ಮನೆಯಲ್ಲಿ ಬಾಡಿಗೆಗೆ ಇದ್ದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 1 ಮತ್ತು 2 ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ-</u>

. ನಂಜರಾಜನಹುಂಡಿಯಿಂದ ಕೇರ್ಗಳ್ಳಿಗೆ 2 ಕಿ.ಮೀ ಅಂತರ ಇದೆ. ನನ್ನ ಜಮೀನು ಮತ್ತು ಮನೆ ಕೇರ್ಗಳ್ಳಿ ಗ್ರಾಮಕ್ಕೆ ಗ್ರಾಮಕ್ಕೆ ಹೊಂದಿಕೊಂಡಿದೆ ಎಂದರೆ ಸರಿಯಲ್ಲ. ಸುಮಾರು ಅರ್ಧ ಮುಕ್ಕಾಲು ಕಿ.ಮೀ ದೂರ ಇದೆ. ಜಮೀನು ಮತ್ತು ಮನೆ ನನ್ನ ತಂದೆಯ ಹೆಸರಿನಲ್ಲಿ ಇದೆ. ನನ್ನ ತಂದೆ ಜೀವಿತ ಇದ್ದಾರೆ. ಜಮೀನು ಮತ್ತು ಮನೆಯ ಉಸ್ತುವಾರಿಯನ್ನು ನನ್ನ ತಂದೆ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. 15 ದಿನಗಳಿಗೆ ಒಮ್ಮೆ ಮತ್ತು ತಿಂಗಳಿಗೆ ಒಮ್ಮೆ ನಾನು ಹೋಗಿ ನೋಡಿಕೊಳ್ಳತ್ತೇನೆ. ಜಮೀನು ಈಗ ಪಾಳು ಬಿಟ್ಟಿದೆ. ಧರ್ಮೇಂದ್ರನ ಪತ್ನಿ ಮತ್ತು ಸಂಸಾರದ ಬಗ್ಗೆ ಗೊತ್ತಿಲ್ಲ. ಮನೆಯ ಎದುರು ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ.

ಸದರಿ ರಸ್ತೆಯಲ್ಲಿ ಗ್ರಾಮಸ್ಥರು ಮತ್ತು ಸಾರ್ವಜನಿಕರು ಒಡಾಡುತ್ತಾರೆ ಎಂದರೆ ಸರಿ. ನಾನು ಪೋ.ಠಾಣೆಗೆ ಹೋದಾಗ ಸಂಜೆ *4.00* ರಿಂದ *5.00* ಗಂಟೆ ಆಗಿತ್ತು. ಪೋಟೋದಲ್ಲಿ ಕಂಡುಬರುವ ಬ್ಯಾಗು ಮತ್ತು ಲಾಂಗ್ ಅನ್ನು ನಾನು ಪೋ.ಠಾಣೆಯಲ್ಲಿ ನೋಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.*96* ಪೊಟೋ ನಮ್ಮ ಮನೆಯಲ್ಲಿ ತೆಗೆದಿಲ್ಲ ಎಂದರೆ ಇರಬಹುದು ನನಗೆ ಗೊತ್ತಿಲ್ಲ. *2* ರಿಂದ *5* ನೇ ಆರೋಪಿಗಳನ್ನು ನಾನು ಇಂದು ಮಾತ್ರ ನ್ಯಾಯಾಲಯದಲ್ಲಿ ಮೊದಲ ಬಾರಿ ನೋಡಿದ್ದೇನೆ ಎಂದರೆ ಸರಿ. ನಿ.ಪಿ.*90* ರ ಅಂಶಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ.

**(ಉಳಿದ ಆರೋಪಿಗಳು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.)**

**ಮರು ವಿಚಾರಣೆ:-** ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು